**ಹೆಚ್ಚುವರಿ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ಚಿಂಚೋಳಿ**

**ಸಿಸಿ ನಂ. 742/2022**

| | | | |
|---|---|---|---|
| **ಹೆಸರು** | : | **ವಿಠಲ** | **ಚಾ.ಸಾ.9** |
| **ತಂದೆಯ ಹೆಸರು** | : | **ಸೈಬಣ್ಣ** | **ಪ್ರಾ.ಸಾ.7** |
| **ವಯಸ್ಸು** | : | **22 ವರ್ಷ** | **ದಿನಾಂಕಃ 20-01-2024** |
| **ಉದ್ಯೋಗ** | : | **ಒಕ್ಕಲುತನ** | |
| **ವಾಸಸ್ಥಳ** | : | **ಗಡಿಲಿಂಗದಳ್ಳಿ** | |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದಃ**

ಪ್ರಾಸಾ-1 ಮತ್ತು ಪ್ರಾಸಾ-6 ರವರು ನನಗೆ ಗೊತ್ತು. ಈಗ ನೋಡುತ್ತಿರುವ ನಿಪಿ-5 ರ ದಾಖಲೆಯಲ್ಲಿ ಇರುವ ಸಹಿ ನನ್ನದೆ. ನನ್ನ ಸಹಿಯನ್ನು ನಿಪಿ-5(ಬಿ) ಎಂದು ಎಂದು ಗುರುತಿಸಲಾಯಿತು. ಈಗ 2 ವರ್ಷಗಳ ಹಿಂದೆ ಮಧ್ಯಾಹ್ನ 11 ರಿಂದ 12 ಗಂಟೆ ಸುಮಾರಿಗೆ ಚಂದನಕೇರ ಗ್ರಾಮದ ಒಂದು ಮನೆ ಹತ್ತಿರ ಪೋಲಿಸರು ಬಂದು ಹೋಗಿರುವ ಸಾಕ್ಷಿಗಾಗಿ ನನ್ನ ಸಹಿಯನ್ನು ಪಡೆದಿದ್ದಾರೆ. ಆ ಸಮಯಕ್ಕೆ ಪೋಲಿಸರು ಪ್ರಾಸಾ-1 ರವರ ಜೊತೆ ಸೇರಿ ಒಂದು ಕಲ್ಲನು ಪಡೆದು ಭಾವಚಿತ್ರವನ್ನು ಪಡೆಯುತ್ತಿದ್ದರು. ಸಾಕ್ಷಿ ಭಾವಚಿತ್ರವನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ-2 ಎಂದು ಗುರುತಿಸಲಾಗಿದೆ. ಮು.ಮಾ-1 ನ್ನು ನೋಡಿ ಸಾಕ್ಷಿ ಇದೇ ಪಡೆದುಕೊಂಡಿರಬಹುದು ಎಂದು ನುಡಿಯುತ್ತಾರೆ.

ಈಗ ನೊಡುತ್ತಿರುವ ನಿಪಿ-6 ರ ದಾಖಲೆಯಲ್ಲಿ ನನ್ನ ಸಹಿ ಇದೆ. ನನ್ನ ಸಹಿಯನ್ನು ನಿಪಿ-6(ಬಿ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ಅದೇ ಸಮಯಕ್ಕೆ ತಾವು ಬಂದು ಹೋಗಿರುವ ಸಾಕ್ಷಿಗಾಗಿ ನನ್ನ ಸಹಿಯನ್ನು ಪಡೆದಿದ್ದಾರೆ. ಆ ಸಮಯಕ್ಕೆ ನನ್ನ ಸಮಕ್ಷಮ ಯಾವುದೇ ವಸ್ತು ಜಪ್ತಿ ಮಾಡಿಕೊಂಡಿಲ್ಲ.

(ಈ ಹಂತದಲ್ಲಿ ತನಿಖಾಧಿಕಾರಿಯವರ ಮುಂದೆ ಸಲ್ಲಿಸಿರುವ ಪಂಚನಾಮೆಗಳಿಗೆ ಈ ಸಾಕ್ಷಿ ಭಾಗಶಃ ಪ್ರತಿಕೂಲ ಸಾಕ್ಷ್ಯ ನುಡಿಯುತ್ತಿದ್ದು, ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೊಡುವಂತೆ ಸ.ಸ.ಅ.ರವರು ಅನುಮತಿ ಕೋರುತ್ತಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.)

**ಪಾಟೀ ಸವಾಲುಃ ಸಹಾಯಕ ಸರಕಾರಿ ಅಭಿಯೋಜಕರಿಂದ-**

ದಿನಾಂಕ 07-02-2022 ರಂದು ನನ್ನ ಸಹಿ ಪಡೆದಿದ್ದಾರೆ ಎಂದರೆ ಸರಿ. ಮಧ್ಯಾಹ್ನ 2 ರಿಂದ

3 ರವರೆಗೆ ಪೋಲಿಸರು ಪಂಚನಾಮೆ ಮಾಡುತ್ತಿದ್ದರು ಎಂದರೆ ಸಾಕ್ಷಿ ನೆನಪಿಲ್ಲ ಎಂದು ನುಡಿಯುತ್ತಾರೆ ಮಧ್ಯಾಹ್ನ 1 ಆಗಿರಬಹುದು ಎಂದು ನುಡಿಯುತ್ತಾರೆ. ಮು.ಮಾ-1 ನ್ನು ಪೋಲಿಸರು ಜಪ್ತಿ ಮಾಡಿದ್ದರು ಎಂದರೆ ಅಷ್ಟೊಂದು ಗೊತ್ತಿಲ್ಲ.

ಅದೇ ದಿನ ಸಾಯಂಕಾಲ 4 ರಿಂದ 4.35 ಗಂಟೆಗೆ ಪೋಲಿಸರು ನನಗೆ ರಟಕಲ ಪೋಲಿಸ ಠಾಣೆಗೆ ಕರೆದುಕೊಂಡು ಹೋದರು ಎಂದರೆ ಸರಿಯಲ್ಲ. ಆ ಸಮಯಕ್ಕೆ ಈಗ ನೋಡುತ್ತಿರುವ ಮು.ಮಾ-1 ಮತ್ತು 3 ನ್ನು ಪೋಲಿಸರು ಜಪ್ತಿ ಮಾಡಿದ್ದರು ಎಂದರೆ ಸಾಕ್ಷಿ ನಾನು ಸಹಿ ಮಾಡಿದ ಸ್ಥಳದಲ್ಲಿ ಮು.ಮಾ-1 ಮತ್ತು 3 ಇದ್ದವು ಎಂದು ನುಡಿಯುತ್ತಾರೆ. ಆ ಸಮಯಕ್ಕೆ ಪೋಲಸರು ಮು.ಮಾ-1 ಮತ್ತು 3 ನ್ನು ಜಪ್ತಿ ಪಡಿಸಿರುತ್ತಾರೆ ಎಂದರೆ ಸರಿ.

**ಪಾಟೀ ಸವಾಲುಃ ಆರೋಪಿ ಪರವಾಗಿ ಶ್ರೀ ವಿ.ಬಿ.ಡಿ ವಕೀಲರು ಸಮಯ ಕೋರಿದ್ದರಿಂದ ರೂ. 200/- ಸಾಕ್ಷಿಗೆ ಕೋಡುವಂತೆ ಆದೇಶಿಸಿ ಪಾಟೀ ಸವಾಲಿಗೆ ಸಮಯ ನೀಡಲಾಯಿತು.**

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

**ಹೆಚ್ಚುವರಿ ಪ್ರ.ದ.ನ್ಯಾ.ದಂ. ಚಿಂಚೋಳಿ**